ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಕಾರ್ಪೊರೇಷನ್‌ನವರು ಏನು ಡಿಸಿಷನ್ ತೆಗೆದುಕೊಂಡಿದ್ದಾರೆ ಅಂದರೆ, ಟೋಟಲ್ ಎಸ್ಟಿಮೇಟ್ ಏನಾಗುತ್ತದೆ ಆದರಲ್ಲಿ ಅರ್ಧ ಭಾಗದಷ್ಟು ಕೊಡಲು ಸಮ್ಮತಿ ಇದೆ ಆದರೆ, ರೈಲ್ವೇ ಡಿಪಾರ್ಟಮೆಂಟ್‌ನವರು ಎಸ್ಟಿಮೇಟನ್ನು ಹಾಗೂ 50 ಪರ್‌ಸೆಂಟ್‌ನಷ್ಟು ಹಣವನ್ನು ತಾವು ಕೊಡುತ್ತೇವೆ ಎಂಬ ಬಗ್ಗೆ ಸೂಚನೆಯನ್ನು ಕೂಡ ಇನ್ನೂ ಕೊಟ್ಟಿಲ್ಲ. ಅದು ಬಂದ ಮೇಲೆ ನಾವು ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇವೆ. ನಾವು ಇಷ್ಟು ಹಣ ಕೊಡಲು ಸಿದ್ಧರಿದ್ದೇವೆಂದು ರೈಲ್ವೇ ಡಿಪಾರ್ಟ್‌ಮೆಂಟ್‌ನವರಿಗೆ ತಿಳಿಸಿದ್ದೇವೆ.

ಶ್ರೀ ಚಂದ್ರಕಾಂತ ಬೆಲ್ಲದ:- ತಮಗೆ ಹುಬ್ಬಳ್ಳಿ–ಧಾರವಾಡದ ಆರ್ಥಿಕ ಪರಿಸ್ಥಿತಿಯು ಏನಿದೆ ಎಂಬುದು ಗೊತ್ತಿದೆ. ಈಗ ನೀವು ಅವರಿಗೆ ಹಣ ಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆಯಾದ ಕಾರಣ ಹಣವನ್ನು ಯಾವಾಗ ಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಇದರ ಬಗ್ಗೆ ವಿಚಾರಣೆ ಮಾಡಿ ಯಾವ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ವಿಷಯ:- ರಾಜ್ಯಮಟ್ಟದ ನೇಕಾರ ಸಮಿತಿ ಸ್ಥಾಪನೆ.

284 (2058) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಮಟ್ಟದ ನೇಕಾರರ ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆಯೇ, ಇಲ್ಲದಿದ್ದರೆ ಕಾರಣಗಳೇನು?

ಆ) ನೇಕಾರರ ಸಮಿತಿಯನ್ನು ರಚಿಸಿ ನೇಕಾರರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) ನೇಕಾರರ ಸಮಿತಿಯೆಂದು ರಚಿಸಲಾಗಿಲ್ಲ. ಆದರೆ, ಈಗಾಗಲೇ ರಾಜ್ಯ ಮಟ್ಟದ ಕೈಮಗ್ಗ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಆ) ಈಗಾಗಲೇ ರಚಿಸಿರುವ ಸಲಹಾ ಸಮಿತಿಯ ಸಲಹೆಯಂತೆ ನೇಕಾರರ ಸಮಸ್ಯೆಗಳನ್ನು ಪರಿಹರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಸಚಿವರು ಸಲಹಾ ಸಮಿತಿಯನ್ನು ರಚನೆ ಮಾಡಿದ್ದು, ಅದು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಹೀಗೆ ರಚನೆ ಮಾಡಿರುವುದರ ಬಗ್ಗೆಯೂ ನಮಗ್ಯಾರಿಗೂ ಮಾಹಿತಿಗಳು ಇಲ್ಲ. ಎರಡನೆಯದಾಗಿ ಆ ಸಲಹಾ ಸಮಿತಿಯ ರಚನೆಗೆ ಒಂದೂವರೆ ವರ್ಷಗಳ ಹಿಂದೆ ಪ್ರಯತ್ನಗಳು ನಡೆದು ಮುಖ್ಯವಾಗಿ ನೇಕಾರರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ರಾಜ್ಯಮಟ್ಟದಲ್ಲಿ ಒಂದು ಸಲಹಾ ಸಮಿತಿ ಬೇಕೆಂದು ಹೇಳಿದ್ದರು.

ಆದರಲ್ಲಿ ಎದ್ದು ಬಂದ ಎರಡು ಮುಖ್ಯ ಪ್ರಶ್ನೆಗಳು ಅಂದರೆ, ನೇಕಾರರು ತಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಬೇಕಾಗಿರತಕ್ಕಂಥ ಕಚ್ಚಾ ಸಾಮಗ್ರಿಗಳನ್ನು ಸರಕಾರ ಪರಿಣಾಮಕಾರಿಯಾಗಿ ಮತ್ತು ಸುಲಭ ದರದಲ್ಲಿ ಅನುಕೂಲವಾಗುವ ರೀತಿಯಲ್ಲಿ ಒದಗಿಸುತ್ತಿಲ್ಲ, ಎರಡನೇದಾಗಿ ನೇಕಾರರಿಗೆ ಸರಕಾರದಿಂದ ಬರಬೇಕಾದ ಸವಲತ್ತುಗಳು ಸಕಾಲದಲ್ಲಿ ಸಿಗುತ್ತಾ ಇಲ್ಲ, ಹೀಗಾಗಿ ನೇಕಾರರ ಸಾವಿರಾರು ಬಡಕುಟುಂಬಗಳು ಇವೊತ್ತು ತುಂಬಾ ಕಷ್ಟಕ್ಕೆ ಸಿಲುಕಿವೆ. ಆ ಕಷ್ಟಗಳಿಂದ ಪಾರು ಮಾಡಲು ಸರಕಾರವು ಏನು ಮಾಡಬೇಕೆಂಬ ಬಗ್ಗೆ ಸಲಹೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಿತ್ತು. ಆ ಸಮಿತಿಯು ಇದುವರೆಗೂ ತನ್ನ ಕಾರ್ಯವನ್ನು ಪ್ರಾರಂಭ ಮಾಡಿಲ್ಲ. ಅದು ರಚನೆಯಾಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ನನ್ನದೇ ಆದಂಥ ಅಭಿಪ್ರಾಯವಿದೆ. ನಿಮ್ಮ ಪ್ರಕಾರ ರಚನೆಯಾಗಿದ್ದು ಕೆಲಸವನ್ನು ಪ್ರಾರಂಭ ಮಾಡಿಲ್ಲ. ಹಾಗಾದರೆ ಆದಕ್ಕೆ ಏನು ಅಡ್ಡಿ ಇದೆ? ಮತ್ತು ನೇಕಾರರ ಸಮಸ್ಯೆಗಳನ್ನು ಪರಿಹಾರ ಮಾಡಲು ಅದರಲ್ಲೂ ಮುಖ್ಯವಾಗಿ ಅವರಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಸರಬರಾಜು ಮಾಡಲು ಸರಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಅವರು ಕೇಳಿರತಕ್ಕಂಥ ಪ್ರಶ್ನೆ ರಾಜ್ಯಮಟ್ಟದ ನೇಕಾರರ ಸಮಿತಿಯನ್ನು ಸರಕಾರದವರು ರಚಿಸಿದ್ದಾರೆಯೇ ಎಂದು. ಸರಕಾರ ನೇಕಾರರ ಸಮಿತಿ ಎಂದು ರಚನೆ ಮಾಡಿಲ್ಲ. ಅಲ್ಲಿ ಕೈಮಗ್ಗದ ಸಲಹಾ ಸಮಿತಿಯನ್ನು ರಚನೆ ಮಾಡಿದೆ. ಅಲ್ಲಿ ಇನ್ನಿತರ ಜನರು ಕೂಡ ಸಲಹಾ ಸಮಿತಿಯಲ್ಲಿದ್ದಾರೆ. ಈಗಾಗಲೇ ಅದು ಎರಡು ಸಲ ಮೀಟಿಂಗ್ ಮಾಡಿ ಕಾರ್ಯನಿರ್ವಹಿಸುತ್ತಾ ಇದೆ. ಮಾನ್ಯ ಸದಸ್ಯರು ಹೇಳಿರತಕ್ಕಂಥಾದ್ದು ಅಂದರೆ, ಹಿಂದೆ ಮಾನ್ಯ ಸಿದ್ಧನಗೌಡರು ಜವುಳಿ ಸಚಿವರಾಗಿದ್ದ ಸಂದರ್ಭದಲ್ಲಿ ಒಂದು ನೇಕಾರರ ಸಲಹಾ ಸಮಿತಿಯನ್ನು ಮಾಡಬೇಕೆಂಬ ಚರ್ಚೆಯಾಗಿ ಅದಕ್ಕೆ ಬೇಕಾಗುವ ರೂಪುರೇಷೆಗಳನ್ನೆಲ್ಲಾ ತಯಾರು ಮಾಡಿದ್ದರು. ಆ ಬಗ್ಗೆ ಪ್ರೊಪೋಸಲ್ ಸರಕಾರದ ಮುಂದಿದೆ. ಆದಷ್ಟು ಜಾಗ್ರತೆ ಆ ಸಮಿತಿಯನ್ನು ರಚನೆ ಮಾಡಲಾಗುತ್ತದೆ. ಈಗ ನೇಕಾರರಿಗೆ ಬೇಕಾಗುವ ನೂಲು ಮತ್ತಿತರ ವಸ್ತುಗಳನ್ನು ಸರಬರಾಜು ಮಾಡುವುದು ಈ ಸಮಿತಿಯ ಉದ್ದೇಶ. ಆ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆಯಾಗಿ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಹಿಂದೆ ಮಾನ್ಯಶ್ರೀ ಭಾಂಗಿಯವರ. . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಆ ಸಮಿತಿಯ ಉದ್ದೇಶವೂ ಹಾಗೆಯೇ ಇದ್ದಿದ್ದರೆ ಇನ್ನೊಂದು ಸಮಿತಿಯನ್ನು ರಚನೆ ಮಾಡತಕ್ಕಂಥ ಅವಶ್ಯಕತೆಯು ಇರಲಿಲ್ಲ. ಆದರೆ ವಾಸ್ತವವಾಗಿ ನಡೆದದ್ದು ಏನೆಂದರೆ ಈ ಸಮಿತಿಯಿಂದ ನೇಕಾರರಿಗೆ ಇರತಕ್ಕಂಥ ಮೂಲಭೂತ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲವಾದ ಕಾರಣ ನೇಕಾರರೇ ಹೆಚ್ಚು ಇರತಕ್ಕಂಥ ಸಲಹಾ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿ, ಒಂದು ತೀರ್ಮಾನವಾಯಿತು. ಆ ಸಲಹೆಯು ಬಂದುದು ಈ ಕಾರಣಕ್ಕೋಸ್ಕರವಾಗಿ. ಆ ಸಮಸ್ಯೆ ಎರಡು ವರ್ಷಗಳಿಂದ ಇದುವರೆಗೂ ಪರಿಹಾರವಾಗಿಲ್ಲ. ಸಾವಿರಾರು ಬಡಕುಟುಂಬಗಳು

ತೀವ್ರವಾದ ಕಷ್ಟಕ್ಕೊಳಗಾಗಿವೆ. ಅದನ್ನು ತಕ್ಷಣ ಪರಿಹಾರ ಮಾಡಲು ಸರಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್:- ಹಿಂದಿನ ಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ಈ ಪ್ರೊಪ್ರೋಸಲ್ ಬಂದಿದೆ. ಆದಷ್ಟು ಶೀಘ್ರವಾಗಿ ಆ ಸಮಿತಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಹಿಂದೆ ನೇಕಾರರ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಲು ತಾತಾಸಾಹೇಬ್ ಭಾಂಗಿಯವರ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಅವರು ತನ್ನ ವರದಿಯನ್ನು ಕೊಟ್ಟಿದ್ದರು. ಆ ಸಂದರ್ಭದಲ್ಲಿ ನೇಕಾರರು ಆಮರಣ ಉಪವಾಸವನ್ನು ಮಾಡಿದ್ದರು. ಆಗಿನ ಮುಖ್ಯಮಂತ್ರಿಯವರಾದ ಶ್ರೀ ವೀರಪ್ಪ ಮೊಯಿಲಿಯವರು ಅವರನ್ನು ಭೇಟಿ ಮಾಡಿದ್ದರು. ಅವರು ಭಾಂಗಿ ವರದಿಯನ್ನು ಕಾರ್ಯರೂಪಕ್ಕೆ ತರುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಆದುದರಿಂದ ತಾತಾ ಸಾಹೇಬ್ ಭಾಂಗಿಯವರ ವರದಿಯನ್ನು ಜಾರಿಗೆ ತರಲು ಸರಕಾರ ದವರು ಸೂಕ್ತ ಕ್ರಮವನ್ನು ಜರುಗಿಸುತ್ತಾರೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ.ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ತಾತಾ ಸಾಹೇಬ್ ಭಾಂಗಿಯವರು ವರದಿಯನ್ನು ಏನು ಕೊಟ್ಟಿದ್ದಾರೆ ಅದನ್ನು ತರಿಸಿ ನೋಡಿ ಪರಿಶೀಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಇಂಟೆನ್ಸೀವ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಎಂದು ಹೇಳಿ, ಅನೇಕ ಕಡೆಗಳಲ್ಲಿದ್ದು ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದ ಕೆಲವು ಕಡೆಗಳಲ್ಲಿದೆ. ನೇಕಾರರಿಗೆ ಬೇಕಾಗುವಂಥ ಕೌಂಟ್ಸ್‌ನ ನೂಲನ್ನು ಇಲ್ಲಿಂದ ಕಳುಹಿಸುವುದಿಲ್ಲ. ಏಕೆಂದರೆ ಇವರು ತಮ್ಮ ಅಕ್ಕಪಕ್ಕದ ಜಿಲ್ಲೆಗಳಿಗೆ ಮೊದಲು ಪ್ರಾತಿನಿಧ್ಯ ಕೊಡುತ್ತಾರೆ. ಇಲ್ಲಿ ಕೊಟ್ಟ ನಂತರ ನಮ್ಮಲ್ಲಿಗೆ ಸರಬರಾಜು ಮಾಡುತ್ತಾರೆ. ಹೀಗೆ ದೂರವಿರುವ ಪ್ರದೇಶಗಳಾದ ಬಿಜಾಪುರ, ಗುಲಬರ್ಗ, ಬೀದರ್ ಮುಂತಾದ ಭಾಗಗಳಿಗೆ ನೂಲು ತಲುಪುವುದಿಲ್ಲ. ಹೀಗಾಗಿ ನೇಕಾರರು ಸ್ಟ್ರೈಕ್ ಮಾಡಿದ ಮೇಲೆ, ನಮಗೆ ಹೇಳಿದ ಮೇಲೆ, ನಾವು ಫೋನ್ ಮಾಡಿ ಐದಾರು ದಿನಗಳಿಂದ ಕೆಲಸ ನಿಂತಿದೆ ನೂಲನ್ನು ಕೂಡಲೇ ಕಳುಹಿಸಿಕೊಡಿ ಎಂದಾಗ ಪ್ರಯತ್ನ ಮಾಡಿ ಅಲ್ಪಸ್ವಲ್ಪ ಕಳುಹಿಸುತ್ತಾರೆ. ಅದಕ್ಕಾಗಿ ಅಂಥ ದೂರದ ಪ್ರದೇಶಗಳ ಸಮಸ್ಯೆಯನ್ನು ಪರಿಹರಿಸಲು ಡಿವಿಜನ್ ಮಟ್ಟದಲ್ಲಿ ಡಿಪೋವನ್ನು ಮಾಡಿ ನೇಕಾರರಿಗೆ ಸಹಾಯ ಮಾಡುವುದನ್ನು ಮಾಡುತ್ತೀರೋ ಹೇಗೆ?

ಶ್ರೀ ಎಂ.ಎಸ್. ಪಾಟೀಲ್:- ರಾಜ್ಯದ ನೇಕಾರರಲ್ಲಿ ಆ ಭಾಗ, ಈ ಭಾಗ ಎಂದು ವ್ಯತ್ಯಾಸವಿಲ್ಲ. ನಮ್ಮ ರಾಜ್ಯದಲ್ಲಿನ ದಕ್ಷಿಣ ಭಾಗದಲ್ಲಿ ರೇಷ್ಮೆ ನೇಯ್ಗೆ ಜಾಸ್ತಿ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಹತ್ತಿ ಬಟ್ಟೆ ನೇಕಾರರು ಜಾಸ್ತಿ ಇದ್ದಾರೆ. ನೇಕಾರರಿಗೆ ನೂಲು ಸರಬರಾಜು ಇಲ್ಲದೆ ತೊಂದರೆಯಾಗಿರುವುದು ನಿಜ. ಅದಕ್ಕೆ ನಾವು ಸೂಕ್ತ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಡಿವಿಜನ್‌ಲೆವೆಲ್‌ನಲ್ಲಿ ಡಿಪೋ ಮಾಡಿದರೆ, ಅಂದರೆ

ಗುಲ್ಬರ್ಗದಲ್ಲಿ ಡಿಪೋವನ್ನು ಮಾಡಿದರೆ ಅಲ್ಲಿನ ಹತ್ತಿರ ಜಿಲ್ಲೆಗಳಿಗೆ ಸಪ್ಲೈ ಮಾಡಲು ಸಾಧ್ಯವಾಗುತ್ತದೆ. ಇಲ್ಲವಾದರೆ ಪದೇ ಪದೇ ಅವರು ಇಲ್ಲಿನ ಹೆಡ್‌ಆಫೀಸನ್ನು ಕೇಳಬೇಕು.

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ನಮ್ಮ ಇಲ್ಲಿನ ಹೆಡ್‌ಆಫೀಸ್‌ನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆ ಕೆಲಸವನ್ನು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೆಡ್‌ಆಫೀಸ್ ಹುಬ್ಬಳ್ಳಿಗೆ ಹೋದರೂ ಕೂಡ ಅಲ್ಲಿಂದ ಗುಲ್ಬರ್ಗ 500-600 ಕಿಮೀ ಅಂತರದಲ್ಲಿದೆ. ಒಂದೊಂದು ಡಿವಿಜನಲ್ ಹೆಡ್‌ಕ್ವಾರ್ಟರ್‌ನಲ್ಲಿ ಡಿಪೋವನ್ನು ಮಾಡಿದರೆ ಸಮೀಪದವರಿಗೆ ತೀವ್ರಗತಿಯಲ್ಲಿ ನೂಲು ಸರಬರಾಜು ಮಾಡಬಹುದು. ನೇಕಾರರಿಗೆ ಕೆಲಸವೂ ಸಿಗುತ್ತದೆ.

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೆ, ನೇಕಾರಿಕೆಯು ಎಲ್ಲಾ ಜಿಲ್ಲೆಗಳಲ್ಲಿಯೂ ಸಾರ್ವತ್ರಿಕವಾಗಿ ನಡೆಯುತ್ತಿರತಕ್ಕಂಥ ಉದ್ಯೋಗ. ಇತ್ತೀಚಿನ ದಿನಗಳಲ್ಲಿ ನೇಕಾರರ ಮಕ್ಕಳು ನೇಯ್ಗೆ ಕೆಲಸವನ್ನು ಮಾಡುವುದನ್ನು ನಿಲ್ಲಿಸಿದ್ದಾರೆ. ಕಾರಣವೇನೆಂದರೆ ಈ ಉದ್ಯೋಗದಿಂದ ಅವರ ಹೊಟ್ಟೆ ತುಂಬುವುದಿಲ್ಲ. ಹಾಗೂ ಅದರ ಪ್ರಗತಿಗೆ ಪೂರಕವಾದ ಯಾವುದೇ ಪ್ರಕ್ರಿಯೆ ವೈಜ್ಞಾನಿಕವಾಗಿ ಅಲ್ಲಿ ನಡೆದಿಲ್ಲ. ದ.ಕ. ಜಿಲ್ಲೆಯ ನಮ್ಮ ಮನೆಯಲ್ಲಿ 25 ಮಗ್ಗಗಳು ಇದ್ದುವು. ಇವೊತ್ತು ಒಂದು ಸಹ ಇಲ್ಲ. ನಾನೊಬ್ಬ ನೇಕಾರ ಅಂದರೆ ಯಾರೂ ನಂಬುವ ಸ್ಥಿತಿ ಇಲ್ಲ. ಮಗ್ಗವನ್ನು ಬಿಚ್ಚಿ ಕಿಟಕಿ ಬಾಗಿಲುಗಳನ್ನು ಮಾಡುತ್ತಿದ್ದಾರೆ, ಮಗ್ಗದ ಮನೆಗಳನ್ನು ಬಾಡಿಗೆಗೆ ಕೊಡುತ್ತಿದ್ದಾರೆ. ಇದು ಏತಕ್ಕಾಗಿ ಆಗುತ್ತಿದೆ? ಇವೊತ್ತಿನ ಹೊಸ ವಾತಾವರಣದಲ್ಲಿ ಕೈಮಗ್ಗ ಉದ್ಯಮಕ್ಕೆ ಪ್ರೋತ್ಸಾಹ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಸರಕಾರ ಸಮಿತಿ ಮಾಡಿದರೆ ಅದರಲ್ಲಿ ನೂಲು ತುಂಡಾದರೆ ಜೋಡಿಸಲು ಗೊತ್ತಿಲ್ಲದ ಜನರು, ಅಧಿಕಾರಿಗಳು ಸದಸ್ಯರಾಗಿದ್ದಾರೆ. ಇಂಥವರು ನೇಕಾರರ ಕಷ್ಟ ಸುಖಗಳನ್ನು ತಿಳಿಯಲು ಹೇಗೆ ಸಾಧ್ಯ? ಆದುದರಿಂದ ಪ್ರಾದೇಶಿಕವಾಗಿ ಸಮಿತಿಗಳನ್ನು ಮಾಡಿ ಅದರಲ್ಲಿ ಸಮರ್ಥರಾದ ನೇಕಾರರನ್ನು ನೇಮಿಸಿ, ಅವರ ಕಷ್ಟ ಸುಖಗಳನ್ನು ವಿಚಾರಮಾಡಿ, ಅವರಿಗೆ ಬೇಕಾದಂಥ ಕಾರ್ಯಾಗಾರ ಮತ್ತು ಇತರ ಸಹಕಾರವನ್ನು, ಸವಲತ್ತುಗಳನ್ನು ಕೊಟ್ಟಾಗ ಮಾತ್ರ ಇದು ಯಶಸ್ವಿಯಾಗಲು ಸಾಧ್ಯ. ಕೇಂದ್ರದಿಂದ ಬಂದ ಹಣ ಇಲ್ಲಿ ಉಪಯೋಗವಾಗದೆ ಹಿಂದೆ ಹೋಗುತ್ತದೆ ಅಂದರೆ ನೇಕಾರರ ಭವಿಷ್ಯವನ್ನು ಸುಧಾರಣೆ ಮಾಡಲು ಸರಕಾರಕ್ಕೆ ಸಾಧ್ಯವೇ? ಈ ಬಗ್ಗೆ ತಾವು ಯೋಚಿಸಬೇಕು ಮತ್ತು ಸೂಚಿಸಬೇಕು.

ಶ್ರೀ ಎಂ.ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಈಗ ಹಿಂದಿಗಿಂತಲೂ ನೇಕಾರರ ಸಂಖ್ಯೆಯು ಕಡಿಮೆಯಾಗುತ್ತಿದೆ. ಅದು ಒಪ್ಪತಕ್ಕಂಥ ವಿಚಾರವಾಗಿದೆ. ಹೀಗೆ ನೇಕಾರರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ನಾನು ಗಮನಿಸಿದ್ದೇನೆ.

ಸುಧಾರಣೆಗಾಗಿ ಬೇಕಾದಂಥ ಕ್ರಮಗಳನ್ನು ಜರುಗಿಸಲು ಇಚ್ಛಿಸಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರು ಸಲಹೆಯನ್ನು ಕೊಟ್ಟಿದ್ದಾರೆ. ಡಿವಿಜನ್‌ಲೆವೆಲ್ ಡಿಪೋವನ್ನು ಮಾಡಿ ನೂಲು ಸರಬರಾಜು ಮಾಡಬೇಕೆಂದು ಹೇಳಿದ್ದಾರೆ. ಉತ್ತಮವಾದ ಅವರ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ (ಉಪಾಧ್ಯಕ್ಷರು):- ಮಾನ್ಯ ಅಧ್ಯಕ್ಷರೆ, ಸರಕಾರದವರು ವಿದ್ಯಾವಿಕಾಸ ಯೋಜನೆಯೊಳಗೆ ಮೊದಲು ನೂಲಿನ ಬಟ್ಟೆಗಳನ್ನು ಉಪಯೋಗ ಮಾಡತಕ್ಕಂಥ ವ್ಯವಸ್ಥೆ ಇತ್ತು. ಈಗ ಪಾಲಿಯೆಸ್ಟರ್ ಬಟ್ಟೆಯನ್ನು ಉಪಯೋಗ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಹೀಗೆ ಮಾಡಿದರೆ ಕರ್ನಾಟಕದಲ್ಲಿನ ಜವಳಿಗಿರಣಿಗಳು ಏನು ನೂಲನ್ನು ಉತ್ಪಾದನೆ ಮಾಡುತ್ತಿದ್ದಾರೆ, ಅದು ಉಳಿದುಕೊಳ್ಳುವ ಸಂಭವವಿದೆ. ಮೊನ್ನೆಯ ದಿವಸ ಅಲ್ಲಿನ ವಿಷಯ ತಿಳಿದು ಬಂದಂತೆ ಪ್ರತಿ ತಿಂಗಳು ಒಂದರಿಂದ ಒಂದೂವರೆ ಲಕ್ಷ ಕೆ.ಜಿ. ನೂಲನ್ನು ಖರೀದಿ ಮಾಡುತ್ತಿದ್ದವರು ಕೇವಲ 20 ಸಾವಿರ ಕೆ.ಜಿ. ಮಾತ್ರ ಖರೀದಿ ಮಾಡುತ್ತಿದ್ದಾರೆ. ಹೀಗಾಗಿ ಮಿಲ್‌ಗಳಲ್ಲಿ ಸಾಕಷ್ಟು ದಾಸ್ತಾನು ಉಳಿದಿದೆ. ಆದುದರಿಂದ ಮೊದಲು ಯಾವರೀತಿಯಲ್ಲಿ ಹತ್ತಿ ಬಟ್ಟೆಯನ್ನು ಒದಗಿಸುತ್ತಿದ್ದರೋ ಹಾಗೆಯೇ ಮಾಡಬೇಕೆಂದು ಸೂಚಿಸ ಬಯಸುತ್ತೇನೆ. ಇದು ಹೊಸ ಪ್ರಶ್ನೆ ಅಲ್ಲ. ಅವರೂ ಕೂಡ ಸಹಕಾರಿ ಮಿಲ್ಲಿನ ಚೇರ್ಮನ್ ಆಗಿ ಕೆಲಸ ಮಾಡಿದ್ದಾರೆ. ನಾನೂ ಕೂಡ ಸಹಕಾರಿ ಮಿಲ್ಲಿನ ಚೇರ್ಮನ್ ಇದ್ದೇನೆ. ಈಗಾಗಲೇ ಒಂದು ಕೋಟಿ 40 ಲಕ್ಷ ರೂಪಾಯಿಗಳ ನೂಲು ನಮ್ಮ ಹತ್ತಿರ ದಾಸ್ತಾನು ಇದೆ.

ಅಧ್ಯಕ್ಷರು:- ಹಾಲಿ ಉಪಾಧ್ಯಕ್ಷರು, ಮಾಜಿ ಉಪಾಧ್ಯಕ್ಷರು ಎಲ್ಲರ ಹತ್ತಿರ ನೂಲು ಇದೆ, ನನಗೆ ಮಾತ್ರ ಅರಿವೆ ಇಲ್ಲ.

ಶ್ರೀ ಚಂದ್ರಶೇಖರ ಮಾಮನಿ (ಉಪಾಧ್ಯಕ್ಷರು):- ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಎಂ.ಎಸ್. ಪಾಟೀಲ್:- ತರಿಸಿಕೊಡುತ್ತೇನೆ.

ವಿಷಯ:- ಮೈಸೂರು ನಗರಕ್ಕೆ ಕುಡಿಯುವ ನೀರು ಯೋಜನೆ.

285 (1150) **ಶ್ರೀ ಎ. ರಾಮದಾಸ್ (ಕೃಷ್ಣರಾಜ):-** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಕುಡಿಯುವ ನೀರಿನ ಯೋಜನೆಯಲ್ಲಿ ಯಾದವಗಿರಿ ನಾಚನಹಳ್ಳಿ ಪಿ.ಎಸ್.ಸಿ. ಪೈಪ್ ಲೈನ್ ಕೆಲಸದ ಯೋಜನೆ ತಯಾರಾಗಿದ್ದು ಯಾವಾಗ?

ಆ) ಸದರಿ ಕೆಲಸ ಪ್ರಾರಂಭವಾಗಿದೆಯೇ? ಆಗಿದ್ದಲ್ಲಿ ಈವರೆವಿಗೂ ಎಷ್ಟು ಕೆಲಸ ಆಗಿದೆ, ಈ ಕೆಲಸ ಎಂದು ಮುಗಿಯಬೇಕು ಹಾಗೂ ಎಂದು ಮುಕ್ತಾಯವಾಗುವುದು?

ಇ) ಈ ಕೆಲಸಕ್ಕೆ ತಗಲುವ ವೆಚ್ಚದ ಮೂಲ ಅಂದಾಜು ಎಷ್ಟು? ಈಗಿನ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-